Akashvani : Bangalore
National Bulletin In Kannada
16.03.2025 : 19.35hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
16.03.2025 : 19.35hrs
***********

**ಮುಖ್ಯಾಂಶಗಳು:**

೧. ಶಾಂತಿಗಾಗಿ ಭಾರತದತ್ತ ಜಗತ್ತಿನ ದೃಷ್ಟಿ - ಪ್ರಧಾನಿ ನರೇಂದ್ರ ಮೋದಿ

೨. ರೈಸಿನಾ ಸಂವಾದ ೨೦೨೫ ಕಾರ್ಯಕ್ರಮಕ್ಕೆ ಕ್ಷಣಗಣನೆ; ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲುಕ್ಸಾನ್ ಭಾಗಿ

೩. ಬೋಡೋಲ್ಯಾಂಡ್ ಪ್ರದೇಶದ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಬದ್ಧ - ಕೇಂದ್ರ ಸಚಿವ ಅಮಿತ್ ಶಾ

೪. ರಿಸರ್ವ್ ಬ್ಯಾಂಕ್‌ಗೆ ೨೦೨೫ರ ಡಿಜಿಟಲ್ ಟ್ರಾನ್ಸ್ ಫಾರ್ಮೇಷನ್ ಪ್ರಶಸ್ತಿ, ಪ್ರಧಾನಿ ನರೇಂದ್ರ ಮೋದಿ ಶ್ಲಾಘನೆ

*****

ಭಾರತವು ಗೌತಮ ಬುದ್ಧ ಮತ್ತು ಮಹಾತ್ಮ ಗಾಂಧಿಯವರ ನಾಡು ಎಂಬ ಕಾರಣಕ್ಕೆ ಶಾಂತಿಯ ಬಗ್ಗೆ ಮಾತನಾಡಿದಾಗಲೆಲ್ಲಾ ಜಗತ್ತು ಅದನ್ನು ಆಲಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿಯವರು ಹೇಳಿದ್ದಾರೆ. ಕೃತಕ ಬುದ್ಧಿಮತ್ತೆ - ಎಐ ಸಂಶೋಧಕ ಮತ್ತು ಪಾಡ್‌ಕಾಸ್ಟರ್ ಲೆಕ್ಸ್‌ಫ್ರಿಡ್ಮನ್ ಅವರೊಂದಿಗಿನ ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿದ ಅವರು, ಭಾರತೀಯರು ಶಾಂತಿ ಮತ್ತು ಸಾಮರಸ್ಯವನ್ನು ಪ್ರತಿಪಾದಿಸುತ್ತಾರೆ ಎಂದರು. ರಷ್ಯಾ-ಉಕ್ರೇನ್ ಸಂಘರ್ಷದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಎರಡು ರಾಷ್ಟ್ರಗಳು ಮಾತುಕತೆಗೆ ಮುಂದಾದಾಗ ಮಾತ್ರ ಸಂಘರ್ಷಕ್ಕೆ ಪರಿಹಾರ ಸಿಗುತ್ತದೆ. ಉಕ್ರೇನ್ ಮಿತ್ರರಾಷ್ಟ್ರಗಳೊಂದಿಗೆ ಲೆಕ್ಕವಿಲ್ಲದಷ್ಟು ಚರ್ಚೆಗಳನ್ನು ನಡೆಸಿದರೂ, ಎರಡೂ ದೇಶಗಳು ಪಾಲ್ಗೊಳ್ಳದಿದ್ದರೆ ಯಾವುದೇ ಫಲ ಸಾಧ್ಯವಿಲ್ಲ ಎಂದಿದ್ದಾರೆ. ಭಾರತ- ಚೀನಾ ಸಂಬಂಧಗಳ ಕುರಿತು ಮಾತನಾಡಿದ ಅವರು, ಹಿಂದಿನ ಶತಮಾನಗಳಲ್ಲಿ ಭಾರತ-ಚೀನಾ ನಡುವೆ ಸಂಘರ್ಷದ ಇತಿಹಾಸವಿಲ್ಲ. ಎರಡು ದೇಶಗಳು ಒಟ್ಟಾಗಿ ಜಾಗತಿಕ ಒಳಿತಿಗೆ ಕೊಡುಗೆ ನೀಡಿವೆ. ಭವಿಷ್ಯದಲ್ಲಿಯೂ ಭಾರತ- ಚೀನಾ ನಡುವೆ ಬಲವಾದ ಸಂಬಂಧಗಳು ಮುಂದುವರಿಯಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಬೈಟ್; ಪ್ರಧಾನಿ ನರೇಂದ್ರ ಮೋದಿ

*****

ನವದೆಹಲಿಯಲ್ಲಿ ನಾಳೆ ನಡೆಯಲಿರುವ ರೈಸಿನಾ ಸಂವಾದ-೨೦೨೫ ಕಾರ್ಯಕ್ರಮವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲುಕ್ಸಾನ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ರೈಸಿನಾ ಸಂವಾದದ ೧೦ನೇ ಆವೃತ್ತಿ ಇದಾಗಿದ್ದು, ನಾಳೆಯಿಂದ ಮಾರ್ಚ್ ೧೯ ರವರೆಗೆ ಮೂರು ದಿನಗಳ ಕಾಲ ಈ ಸಂವಾದ ನಡೆಯಲಿದೆ. ಈ ಸಂವಾದ, ಜಾಗತಿಕ ಸಮುದಾಯ ಎದುರಿಸುತ್ತಿರುವ ಸವಾಲಿನ ಸಮಸ್ಯೆಗಳನ್ನು ಪರಿಹರಿಸಲು ಬದ್ಧವಾಗಿರುವ ಭೌಗೋಳಿಕ, ರಾಜಕೀಯ ಮತ್ತು ಭೂ ಅರ್ಥಶಾಸ್ತ್ರದ ಕುರಿತಾದ ಭಾರತದ ಪ್ರಮುಖ ಸಮ್ಮೇಳನವಾಗಿದೆ. ಪ್ರತಿ ವರ್ಷ, ರಾಜಕೀಯ, ವ್ಯವಹಾರ, ಮಾಧ್ಯಮ ಮತ್ತು ನಾಗರಿಕ ಸಮಾಜದ ನಾಯಕರು ನವದೆಹಲಿಯಲ್ಲಿ ಈ ವೇದಿಕೆಯಲ್ಲಿ ಒಟ್ಟುಗೂಡಿ ವಿಶ್ವದ ಸದ್ಯದ ಪರಿಸ್ಥಿತಿ ಹಾಗೂ ವಿವಿಧ ಸಮಕಾಲೀನ ವಿಷಯಗಳಲ್ಲಿ ಸಹಕಾರಕ್ಕಾಗಿ ಅವಕಾಶ ಅನ್ವೇಷಿಸುವ ಕುರಿತು ಚರ್ಚೆ ನಡೆಸುತ್ತಾರೆ. ಈ ಸಂವಾದದಲ್ಲಿ ಸುಮಾರು ೧೨೫ ದೇಶಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ೩ ಸಾವಿರದ ೫೦೦ಕ್ಕೂ ಹೆಚ್ಚು ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಜಗತ್ತಿನ ಲಕ್ಷಾಂತರ ಜನರು ಡಿಜಿಟಲ್ ವೇದಿಕೆಗಳ ಮೂಲಕ ಈ ಕಾರ್ಯಕ್ರಮವನ್ನು ವೀಕ್ಷಿಸಲಿದ್ದಾರೆ. ಈ ಸಂವಾದದಲ್ಲಿ ಪಾಲ್ಗೊಳ್ಳಲು ವಿವಿಧ ದೇಶಗಳ ಗಣ್ಯರು, ನವದೆಹಲಿಗೆ ಆಗಮಿಸುತ್ತಿದ್ದಾರೆ.

*****

ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲುಕ್ಸಾನ್ ಐದು ದಿನಗಳ ಭಾರತ ಭೇಟಿಗಾಗಿ ಇಂದು ನವದೆಹಲಿಗೆ ಆಗಮಿಸಿದ್ದಾರೆ. ಅವರೊಂದಿಗೆ ಸಚಿವರು, ಹಿರಿಯ ಅಧಿಕಾರಿಗಳು, ಉದ್ಯಮಿಗಳು, ಮಾಧ್ಯಮ ಪ್ರತಿನಿಧಿಗಳು ಹಾಗೂ ಅನಿವಾಸಿ ಭಾರತೀಯ ಸಮುದಾಯದ ಸದಸ್ಯರನ್ನೊಳಗೊಂಡ ಉನ್ನತಮಟ್ಟದ ನಿಯೋಗವಿದೆ. ನ್ಯೂಜಿಲೆಂಡ್ ಪ್ರಧಾನಿಯವರನ್ನು ವಿಮಾನ ನಿಲ್ದಾಣದಲ್ಲಿ ಮೀನುಗಾರಿಕೆ, ಪಶುಸಂಗೋಪಣೆ ಮತ್ತು ಹೈನುಗಾರಿಕೆ ರಾಜ್ಯ ಸಚಿವ ಪ್ರೊ. ಎಸ್. ಪಿ. ಸಿಂಗ್ ಬಘೇಲ್ ಸ್ವಾಗತಿಸಿದರು. ನಾಳೆ ನಡೆಯಲಿರುವ ರೈಸಿನಾ ಸಂವಾದ ೨೦೨೫ ಕಾರ್ಯಕ್ರಮದಲ್ಲಿ ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲುಕ್ಸಾನ್ ಭಾಗವಹಿಸಲಿದ್ದು, ಭಾರತ-ನ್ಯೂಜಿಲೆಂಡ್ ನಡುವಿನ ಸಂಬಂಧಗಳ ಕುರಿತಂತೆ ಮಾತುಕತೆ ನಡೆಸಲಿದ್ದಾರೆ. ಇದರ ಜೊತೆಗೆ ಅವರು, ಹತ್ತನೇ ರೈಸಿನಾ ಸಂವಾದ ೨೦೨೫ರ ಉದ್ಘಾಟನಾ ಅಧಿವೇಶನದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಪ್ರಧಾನ ಭಾಷಣ ಮಾಡಲಿದ್ದಾರೆ.

ನಂತರ ಅವರು, ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಹಾಗೂ ನ್ಯೂಜಿಲೆಂಡ್ ಪ್ರಧಾನಿ ಲುಕ್ಸಾನ್ ಮುಂಬೈಗೆ ಭೇಟಿ ನೀಡಲಿದ್ದು, ಮುಂಬೈನಲ್ಲಿ ಉದ್ಯಮಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

*****

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಬೋಡೋಲ್ಯಾಂಡ್ ಪ್ರದೇಶದ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಇಂದು ಹೇಳಿದ್ದಾರೆ.

ಇಂದು ಅಸ್ಸಾಂನ ಕೊಕ್ರಜಾರ್ ಜಿಲ್ಲೆಯ ದೋಟ್ಮಾದಲ್ಲಿ ಆಲ್ ಬೋಡೋ ಸ್ಟೂಡೆಂಟ್ಸ್ ಯೂನಿಯನ್‌ನ ೫೭ನೇ ವಾರ್ಷಿಕ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಸಚಿವರು, ಬೋಡೋ ಒಪ್ಪಂದದ ಎಲ್ಲಾ ಷರತ್ತುಗಳನ್ನು ಪೂರೈಸಲು ಕೇಂದ್ರವು ಬದ್ಧವಾಗಿದೆ ಎಂದು ಹೇಳಿದರು. ಒಪ್ಪಂದದ ಶೇಕಡ ೮೨ರಷ್ಟು ಷರತ್ತುಗಳನ್ನು ಈಗಾಗಲೇ ಪೂರೈಸಲಾಗಿದೆ ಮತ್ತು ಒಪ್ಪಂದದ ಉಳಿದ ಷರತ್ತುಗಳನ್ನು ಎರಡು ವರ್ಷಗಳೊಳಗೆ ಪೂರೈಸಲಾಗುವುದು ಎಂದು ಅವರು ಹೇಳಿದರು. ಬೋಡೋಲ್ಯಾಂಡ್ ಪ್ರಾದೇಶಿಕ ಪ್ರದೇಶ - ಬಿಟಿಆರ್‌ನಲ್ಲಿ ಈಗ ಶಾಂತಿ ನೆಲೆಸಿದ್ದು, ಮೊದಲು ಈ ಪ್ರದೇಶವು ಹಿಂಸಾಚಾರಕ್ಕೆ ಹೆಸರುವಾಸಿಯಾಗಿತ್ತು ಆದರೆ ಈಗ ಈ ಪ್ರದೇಶದ ಯುವಕರು ಅಶಾಂತಿಗಿಂತ ಅಭಿವೃದ್ಧಿಗೆ ಆದ್ಯತೆ ನೀಡುತ್ತಿದ್ದಾರೆ ಎಂದರು. ದೆಹಲಿಯಲ್ಲಿ ಸಾಮಾಜಿಕ ಕಾರ್ಯಕರ್ತ ಮತ್ತು ಆಲ್ ಬೋಡೋ ಸ್ಟೂಡೆಂಟ್ಸ್ ಯೂನಿಯನ್‌ನ ಮಾಜಿ ಅಧ್ಯಕ್ಷ ಉಪೇಂದ್ರನಾಥ್ ಬ್ರಹ್ಮ ಅವರ ಪ್ರತಿಮೆಯ ಜೊತೆಗೆ ದೆಹಲಿಯಲ್ಲಿನ ರಸ್ತೆಗೆ ಶೀಘ್ರದಲ್ಲೇ ಅವರ ಹೆಸರಿಡಲಾಗುವುದು ಎಂದು ಕೇಂದ್ರ ಸಚಿವರು ಘೋಷಿಸಿದರು.

*****

ಲಂಡನ್ ಯುಕೆಯ ಸೆಂಟ್ರಲ್ ಬ್ಯಾಂಕಿಂಗ್‌ನಿಂದ ೨೦೨೫ರ ಡಿಜಿಟಲ್ ಟ್ರಾನ್ಸ್ ಫಾರ್ಮೇಷನ್ ಪ್ರಶಸ್ತಿಗೆ ಆಯ್ಕೆಯಾದ ಭಾರತೀಯ ರಿಸರ್ವ್ ಬ್ಯಾಂಕ್ ಅನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಶ್ಲಾಘಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಹಂಚಿಕೊಂಡಿರುವ ಅವರು, ಈ ಸಾಧನೆಯು ಆಡಳಿತದಲ್ಲಿ ನಾವೀನ್ಯತೆ ಮತ್ತು ದಕ್ಷತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು. ಡಿಜಿಟಲ್ ನಾವೀನ್ಯತೆಯು ಭಾರತದ ಹಣಕಾಸು ವ್ಯವಸ್ಥೆಯನ್ನು ಬಲಪಡಿಸುವುದರೊಂದಿಗೆ ಅಸಂಖ್ಯಾತ ಜನರನ್ನು ಸಬಲೀಕರಣಗೊಳಿಸುವುದನ್ನು ಮುಂದುವರೆಸಿದೆ ಎಂದು ಅಭಿಪ್ರಾಯಪಟ್ಟರು.

*****

ಸಂಸದೀಯ ಕಾರ್ಯವಿಧಾನಗಳು, ನೀತಿಸಂಹಿತೆ ಮತ್ತು ಉತ್ತಮ ಆಡಳಿತ ಪದ್ಧತಿಗಳ ಜ್ಞಾನವನ್ನು ನೀಡುವ ಹಿನ್ನೆಲೆ, ದೆಹಲಿ ವಿಧಾನಸಭೆಯು ತನ್ನ ನೂತನ ಶಾಸಕರಿಗೆ ಎರಡು ದಿನಗಳ ಕಾರ್ಯಗಾರವನ್ನು ಹಮ್ಮಿಕೊಂಡಿದೆ. ಇದೇ ಮಂಗಳವಾರದಿಂದ ನಡೆಯಲಿರುವ ಕಾರ್ಯಕ್ರಮವನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಉದ್ಘಾಟಿಸಲಿದ್ದಾರೆ. ಉದ್ಘಾಟನಾ ಅಧಿವೇಶನದಲ್ಲಿ ದೆಹಲಿ ವಿಧಾನಸಭೆ ಸ್ಪೀಕರ್ ವಿಜೇಂದರ್ ಗುಪ್ತಾ, ಉಪ ಸ್ಪೀಕರ್ ಮೋಹನ್ ಸಿಂಗ್ ಬಿಸ್ಟ್, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಮತ್ತು ವಿರೋಧ ಪಕ್ಷದ ನಾಯಕಿ ಅತಿಶಿ ಸೇರಿದಂತೆ ಹಲವಾರು ಗಣ್ಯರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಮಹತ್ವವನ್ನು ತಿಳಿಸಿದ ದೆಹಲಿ ವಿಧಾನಸಭೆ ಸ್ಪೀಕರ್ ವಿಜೇಂದರ್ ಗುಪ್ತಾ, ಈ ಕಾರ್ಯಾಗಾರವು ಶಾಸಕರ ಶಾಸಕಾಂಗ ಸಾಮರ್ಥ್ಯಗಳನ್ನು ಬಲಪಡಿಸಲು ಒಂದು ಪ್ರಮುಖ ಉಪಕ್ರಮವಾಗಿದೆ ಎಂದು ಹೇಳಿದರು. ಎರಡು ದಿನಗಳ ಕಾರ್ಯಕ್ರಮವು ತಜ್ಞರ ನೇತೃತ್ವದ

ಉಪನ್ಯಾಸಗಳು, ಫಲಕ ಚರ್ಚೆಗಳು ಮತ್ತು ಉತ್ತಮ ಆಡಳಿತ, ನೀತಿ ನಿರೂಪಣೆ ಮತ್ತು ಶಾಸಕಾಂಗ ಚೌಕಟ್ಟುಗಳ ಮೇಲೆ ಕೇಂದ್ರೀಕರಿಸಿದ ಸಂವಾದಾತ್ಮಕ ಅಧಿವೇಶನಗಳನ್ನು ಒಳಗೊಂಡಿರಲಿದ್ದು, ಲೋಕಸಭಾ ಸ್ಪೀಕರ್ ಅವರ ಮಾರ್ಗದರ್ಶನದಲ್ಲಿ ಸಂಸದರು, ಶಾಸಕಾಂಗ ಸಿಬ್ಬಂದಿ ಮತ್ತು ಇತರ ಪಾಲುದಾರರಿಗೆ ತರಬೇತಿ ನಡೆಯಲಿದೆ.

*****

ಒಡಿಯಾ ಸಾಹಿತ್ಯ ಲೋಕದ ಖ್ಯಾತ ಆಧುನಿಕ ಕವಿ ಪದ್ಮಭೂಷಣ ಪುರಸ್ಕೃತ ರಮಾಕಾಂತ್ ರಥ್ ಇಂದು ಮುಂಜಾನೆ ಭುವನೇಶ್ವರದಲ್ಲಿ ನಿಧನರಾಗಿದ್ದಾರೆ. ಅವರಿಗೆ ೯೧ ವರ್ಷ ವಯಸ್ಸಾಗಿತ್ತು. ರಮಾಕಾಂತ್ ರಥ್ ಅವರ ನಿಧನಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂತಾಪ ಸೂಚಿಸಿದ್ದಾರೆ. ಸಾಮಾಜಿಕ ಜಾಲತಾಣದ ತಮ್ಮ ಸಂದೇಶದಲ್ಲಿ ರಮಾಕಾಂತ್ ರಥ್ ಅವರನ್ನು ಭಾರತೀಯ ಸಾಹಿತ್ಯ ಲೋಕದಲ್ಲಿ ಪ್ರಮುಖ ವ್ಯಕ್ತಿ ಎಂದು ಹೇಳಿದ್ದಾರೆ. ಪದ್ಮಭೂಷಣ ಸೇರಿದಂತೆ ಹಲವು ಪ್ರಮುಖ ಪ್ರಶಸ್ತಿಗಳನ್ನು ರಮಾಕಾಂತ್ ರಥ್ ಅವರಿಗೆ ನೀಡಿ ಗೌರವಿಸಲಾಗಿದೆ. ಖ್ಯಾತ ಕವಿ ಒಡಿಯಾ ಸಾಹಿತ್ಯಕ್ಕೆ ತಮ್ಮ ಮರೆಯಲಾಗದ ಕೊಡುಗೆಯನ್ನು ನೀಡಿ, ಅಖಿಲ ಭಾರತ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ ಎಂದು ಅವರು ಹೇಳಿದ್ದಾರೆ.

*****

ನವದೆಹಲಿಯಲ್ಲಿಂದು ಸ್ಪರ್ಧಾತ್ಮಕ ಕಾನೂನಿನ ಅರ್ಥಶಾಸ್ತ್ರದ ೧೦ನೇ ರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಕಾರ್ಪೋರೇಟ್ ವ್ಯವಹಾರಗಳ ರಾಜ್ಯ ಸಚಿವ ಹರ್ಷ್ ಮಲ್ಹೋತ್ರ, ಈ ಸಮ್ಮೇಳನವು ಭಾರತೀಯ ಆರ್ಥಿಕತೆಯನ್ನು ಬಲಪಡಿಸುವ ಪ್ರಮುಖ ಪ್ರಯತ್ನವಾಗಿದೆ ಎಂದರು. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಭಾರತದ ಆರ್ಥಿಕತೆಯು ೧೧ನೇ ಸ್ಥಾನದಿಂದ ೫ನೇ ಸ್ಥಾನಕ್ಕೇರಿದೆ. ಪ್ರಧಾನಿಯವರ ದೂರದೃಷ್ಟಿಯೊಂದಿಗೆ ಮುಂದಿನ ನಾಲ್ಕು ವರ್ಷಗಳಲ್ಲಿ ಭಾರತದ ಆರ್ಥಿಕತೆಯು ಜಾಗತಿಕವಾಗಿ ೩ನೇ ಸ್ಥಾನದಲ್ಲಿರುತ್ತದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

*****

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು, ಬಿಹಾರದ ಪಾಟ್ನಾ ಜಿಲ್ಲೆಯ ಧಾನಾಪುರ ಪ್ರದೇಶದ ಬಡಕುಟುಂಬದ ಪ್ರತಿಭಾನ್ವಿತ ವಿದ್ಯಾರ್ಥಿನಿ ಖುಷ್ಬು ಕುಮಾರಿಗೆ ಸಹಾಯ ಮಾಡಲು ಮುಂದಾಗಿದ್ದಾರೆ. ಖುಷ್ಬು ವೈದ್ಯೆಯಾಗಬೇಕು ಎಂಬ ಆಶಯ ಹೊಂದಿದ್ದಳು, ಆದರೆ ಆರ್ಥಿಕವಾಗಿ ದುರ್ಬಲ ಹಿನ್ನೆಲೆಯಿಂದಾಗಿ ಅವರ ತಂದೆಗೆ ಅಧ್ಯಯನದ ವೆಚ್ಚವನ್ನು ಭರಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ಆಕೆಯನ್ನು ಕಲಾ ವಿಭಾಗದಲ್ಲಿ ಅಧ್ಯಯನ ಮಾಡಲು ಸೇರಿಸಿದ್ದಾರೆ. ತನ್ನ ಕನಸು ನುಚ್ಚು ನೂರಾಗುತ್ತಿದ್ದಂತೆ ಖುಷ್ಬು ಮಾಧ್ಯಮದವರ ಮುಂದೆ ತನ್ನ ದುಃಖವನ್ನು ಹೇಳಿಕೊಂಡಿದ್ದಾಳೆ. ಅದು ವೈರಲ್ ಆಗಿತ್ತು. ಈ ಘಟನೆಯ ಬಗ್ಗೆ ತಿಳಿದ ಸಚಿವ ಪ್ರಧಾನ್ ಅವರು, ವಿಡಿಯೋ ಕಾಲ್ ಮೂಲಕ

ಖುಷ್ಬು ತಂದೆ, ತಾಯಿಯೊಂದಿಗೆ ಮಾತನಾಡಿ, ಆಕೆಯ ಕನಸು ನನಸಾಗಿಸಲು ಸರ್ಕಾರ ನೆರವಾಗಲಿದೆ ಎಂದ ಅವರು, ಅಡ್ಮಿಷನ್ ಕುರಿತು ಚಿಂತಿಸಬೇಕಾಗಿಲ್ಲ ಎಂದರು.

*****

ಇಂಟರ್ ನ್ಯಾಷನಲ್ ಮಾಸ್ಟರ್ ಲೀಗ್ ೨೦೨೫ ಕ್ರಿಕೆಟ್‌ನ ಪೈನಲ್ ಪಂದ್ಯ ಪ್ರಗತಿಯಲ್ಲಿದ್ದು, ರಾಯ್‌ಪುರದ ಶಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿದೆ. ಫೈನಲ್ ಪಂದ್ಯದಲ್ಲಿ ಸಚಿನ್ ತೆಂಡೂಲ್ಕರ್ ನಾಯಕತ್ವದ ಭಾರತ ತಂಡವು, ಬ್ರಿಯಾನ್ ಲಾರಾ ನಾಯಕತ್ವದ ವೆಸ್ಟ್ ಇಂಡೀಸ್ ತಂಡದೊಂದಿಗೆ ಸೆಣಸುತ್ತಿದೆ. ಟಾಸ್ ಗೆದ್ದ ವೆಸ್ಟ್‌ಇಂಡೀಸ್ ಮಾಸ್ಟರ್ಸ್ ತಂಡ ಬ್ಯಾಟಿಂಗ್ ಆಯ್ದುಕೊಂಡು ಆಡುತ್ತಿದೆ.

***END***